


# ದೇವರು ಮತ್ತು ಒಂದಷ್ಟು

ಗುಂಗುರು ಕೂದಲ ತಲೆ ಗೂಡಾಗಿ
ಗುಬ್ಬಚ್ಚಿ ಮೊಟ್ಟೆ ಇಟ್ಟರೂ ಸಾಕು
ನನ್ನ ಮೈ ಮರವಾದಂತೆಯೇ ಸರಿ

ನಿನ್ನ ಕಣ್ಣುಗಳು ಹಾಲು ಸ್ರವಿಸುತ್ತವೆ ದೇವರೆ
ಹಸಿದ ಅನಾಥ ಮಕ್ಕಳು ನಿರಾಯಾಸವಾಗಿ ಕ್ಷೀರ ಸಮುದ್ರದಲ್ಲಿ
ಲೀಲಾಜಾಲವಾಗಿ ಕುಡಿದೇಳಬಹುದು ನೀನು ಮೊಲೆಯಿರುವ ಗಂಡಸು

ಪ್ರೀತಿಗೆ ಹಸಿದವರು ನಿನ್ನ ಮೊಲೆಗಳನ್ನು ಇಷ್ಟಪಟ್ಟು ಕಚ್ಚುತ್ತಾರೆ
ಆಗೆಲ್ಲ ನಾಯಿ ಹಾಲುಡುವಂತೆ ನೀನು ಬಿದ್ದುಕೊಳ್ಳುತ್ತಿ
ಅವರು ಹೊಟ್ಟೆ ತುಂಬಿಕೊಂಡ ಮೇಲೆ ನಿನ್ನನ್ನು ರಸ್ತೆಯಲ್ಲೇ ಬಿಟ್ಟು
ಮನೆ ಸೇರಿಕೊಳ್ಳುತ್ತಾರೆ ಜೊತೆ ಬಾಗಿಲೂ ಜಡಿದುಕೊಳ್ಳುತ್ತಾರೆ

ನೀನೋ ಎತ್ತುವವರಿಲ್ಲದೆ, ಬಿದ್ದವರು ತಾವೇ ಎದ್ದು ಕುಂಟುತ್ತಾ
ಸಾಗುವಂತೆ ಚಲನಶೀಲನಾಗುತ್ತಿ ಮತ್ತೆ ನಾಳೆ ಹಸಿದಾಗ
ಅವರು ನಿನ್ನನ್ನು ದರದರ ಎಳೆದು ತರುತ್ತಾರೆ ಬೀದಿಗೆ ನೋಡಿಕೋ

ನಿನ್ನ ಕಣ್ಣುಗಳು ಈ ಬಾರಿ ಖಂಡಿತ ತೇವವನ್ನಷ್ಟೇ ಒಸರುತ್ತವೆ
ನೀನು ಬಂಜೆಯಂತೆ ಹೊಟ್ಟೆ ಸವರಿಕೊಳ್ಳುತ್ತಿ
ಮೊಲೆಗಳ ಹಿಂಡಿ ಹಿಸುಕಿದರೂ ತೊಟ್ಟು ಹಾಲೂ ಜಿನುಗುವುದಿಲ್ಲ
ದುಗುಡಕ್ಕೆ ಕೃತಕ ಕಟ್ಟಿದ ಒಡ್ಡು ಒಡೆದು ಹರಿಯುತ್ತದೆ ಕಣ್ಣೀರು

ನನಗೆ ಗೊತ್ತು ಹಾಲುಂಡು ಬೆಳೆದ ಈ ಮರಕ್ಕೆ
ಗುಬ್ಬಚ್ಚಿ ಗೂಡು ಕಟ್ಟುವುದಕ್ಕೂ
ಮೊಟ್ಟೆಯ ಕದ್ದು ತಿನ್ನಲು ಹಾವು ಬರುವುದಕ್ಕೂ ನಡುವೆ
ಬಾಗಿಲು ಕಿಟಕಿಗಳು ಸೃಷ್ಟಿಯಾಗಲೇಬೇಕಾದ ಜರೂರಿದೆ ಎಂದು

ಬೇಕಿಲ್ಲದ ಮನೆಗಳ ಚೌಕಟ್ಟು ಕಿತ್ತು
ಬೇಕಿರುವಲ್ಲಿಗೆ ಸಾಗಿಸಿ ಮರು ಜೋಡಿಸುವುದು ಜಾಣತನ
ಹೊಸ ಬಾಗಿಲು ಕಿಟಕಿಗಳನ್ನು ಕೊಳ್ಳುವುದಲ್ಲ

• **ಕೃಷ್ಣ ಶ್ರೀಕಾಂತ ದೇವಾಂಗಮಠ**